

## 1

‘ಪಿಕ್ಚರ್ ನೋಡಿ ಬಂದಂಗೈತೆ ಬಡ್ಡೀಮಗ. ಕೇಳಾಕಿನ್ನಾ ಮೊದ್ಲೇ ಪ್ಯಾಂಟಿನ್ ಜೋಬಿಗೆ ಕೈ ಹಾಕಿದ’ ಎಂದುಕೊಳ್ಳುತ್ತಾ ಬೈಕಿನವನಿಂದ ಹತ್ತು ರೂಪಾಯಿ ನೋಟನ್ನು ಪಡೆದು ಆಶೀರ್ವಾದದಂತೆ ಅವನ ಹೆಲ್ಮೆಟ್ಟಿನ ಮೇಲೆ ಕೈ ಇಟ್ಟು ಮನದುಂಬಿ ಹರಸಿದ ‘ಅವಳು’ ಮುಂದಿನ ಗಾಡಿಯವನ ಕಡೆ ನಡೆದಳು.

ಕಂಡವರ ಗಮನವನ್ನು ಥಟ್ಟನೇ ಸೆಳೆಯುವಷ್ಟು ದೊಡ್ಡ ಬಿಗಿ ಸ್ತನಗಳು ಮತ್ತು ನಿತಂಬಗಳನ್ನು ಸುತ್ತಿಕೊಂಡಿರುವ ಕಡು ನೀಲಿ ಬಣ್ಣದ ನವಿಲುಗರಿ ಸೆರಗಿನ ಪಾರದರ್ಶಕ ಪಾಲಿಸ್ಟರ್ ಸೀರೆ, ಕಡುಗೆಂಪು ಕುಂಕುಮ, ಸೀರೆಗೆ ಒಪ್ಪುವ ಲಿಪ್‌ಸ್ಟಿಕ್ಕು, ಮುಡಿ ತುಂಬ ಮಲ್ಲಿಗೆ, ಗಲ್ಲ ತುಂಬಿದ ಅರಿಸಿನ, ಕೊರಳಲ್ಲಿನ ಬಂಗಾರದ ಸರ, ಬಲಗೈಯಲ್ಲಿನ ಸಿಲ್ವರ್ ಬಣ್ಣದ ಸಣ್ಣ ವಾಚು ಮತ್ತು ಹೈ ಹೀಲ್ಡ್ ಚಪ್ಪಲಿಗಳು ಇವೆಲ್ಲಾ ಇದ್ದ ‘ಅವಳಿಗೆ’ ಸುಮಾರು ಮೂವತ್ತು ವರುಷ ವಯಸ್ಸು.

ಸುತ್ತಲಿನ ನಾನಾ ತರಹದ ವಾಹನಗಳು, ಹತ್ತು ಹನ್ನೆರಡು ಸಿಗ್ನಲ್ಲು ಕಂಬಗಳು, ಅಲ್ಲೆಲ್ಲೋ ದೂರದಲ್ಲಿ ನಿಂತ ನಾಲ್ಕು ಜನ ಟ್ರಾಫಿಕ್ ಪೊಲೀಸರು, ಸುಮ್ಮ ಸುಮ್ಮನೆ ಹಾರನ್ನು ಹೊಡೆಯುವ ವಾಹನಗಳು, ಎದುರಿಗಿದ್ದ ಗಣಪತಿ ಮತ್ತು ನವಗ್ರಹಗಳ ದೇವಸ್ಥಾನ, ಬೀದಿ ಬದಿಯ ತಳ್ಳೋ ಬಂಡಿಯವರ ಕೂಗಾಟ, ಅಸ್ತವ್ಯಸ್ತ ಆಟೋ ಸ್ಟ್ಯಾಂಡು, ಡೊಂಕಾಗಿರುವ ನೋ ಪಾರ್ಕಿಂಗ್ ಇವತ್ತು ಫ್ರೀ ಲೆಫ್ಟ್ ಬೋರ್ಡುಗಳು, ತಲೆಯಲ್ಲಿ ‘ಗಿವ್’ ಎನ್ನುತ್ತಲೇ ಇರುವ ವಾತಾವರಣ ಇವೆಲ್ಲವುದರ ನಡುವೆ ದುಡ್ಡನ್ನು ಎಣಿಸುತ್ತಾ ‘ಸಾಯಂಕಾಲದೊತ್ತಿಗೆ ಇನ್ನಾ ಜಾಸ್ತಿ ಕಲೆಕ್ಷನ್ ಆಗಂಗೈತೆ’ ಎಂದು ಜೋರಾಗಿ ಹೇಳಿಕೊಂಡು ಸೊಂಟದಲ್ಲಿ ಸಿಗಿಸಿಕೊಂಡಿದ್ದ ಸೆರಗಿನ ತುದಿಯನ್ನು ಬಿಚ್ಚಿ ಬೆವರುತ್ತಿದ್ದ ಹಣೆ ಒರೆಸಿಕೊಂಡಳು ‘ಅವಳು’.

‘ಏನೇ ರಾಧಾ, ಜಗ್ಗಿ ಎಣ್ಸಾಕತ್ತೀ?!’ ಎಂಬ ಮಾತಿನಿಂದ ಇಲ್ಲಿಯ ತನಕ ‘ಅವಳು’ ಆಗಿದ್ದ ‘ಅವಳು’ ಈಗ ಅಂತಹವಳೇ ಇನ್ನೊಬ್ಬಳು ಸಿಕ್ಕಿದ್ದರಿಂದ ‘ರಾಧಾ’ ಎಂಬ ಹೆಸರಿನ ಮಂಗಳಮುಖಿಯಾಗಿ, ‘ಎಲ್ಲಾ ನಮ್ ಪಿಚ್ಚರ್ರಿಂದು ಮಹಿಮೆ’ ಎಂದು ಹುಬ್ಬಾರಿಸಿ ನಕ್ಕಳು. ಇವಳನ್ನು ಕರೆದ ಮಂಗಳಮುಖಿ ಸುಕನ್ಯಾಳೂ ನಕ್ಕಳು. ಚನ್ನಪ್ಪ ಸರ್ಕಲ್ಲಿಂದ ರಾಜ್‌ಕುಮಾರ್ ರೋಡಿಗೆ ಹೋಗುವ ಸಿಗ್ನಲ್ಲಿನ ಬಿಸಿನೆಸ್ಸು ರಾಧಾಳದಾದರೆ, ಇಂದಿರಾನಗರ ರೋಡಿಗೆ ಸುಕನ್ಯಾ ವಾರಸುದಾರಳು. ಈಗ ಇವರು ಮುಂದಿನ ಮಾತಾಡುವಷ್ಟರಲ್ಲಿ ಮತ್ತೆ ಸಿಗ್ನಲ್ ಕೆಂಪಾಗಿದ್ದನ್ನು ಕಂಡು ಇಬ್ಬರೂ ಜೋರಾಗಿ ಚಪ್ಪಾಳೆ ತಟ್ಟುತ್ತಾ ಮತ್ತೆ ರಸ್ತೆಗಿಳಿದರು.